

ಧೀರಾಂಗ್ ಬೌದ್ಧ ವಿಹಾರ

ಘೇಂಡಾಮೃಗಗಳು ಮೇಯುತ್ತ, ಕೆಸರು ನೀರಲ್ಲಿ ಆನಂದವಾಗಿ ವಿಹರಿಸುತ್ತಿದ್ದ ಜಾಗಕ್ಕೆ ಕರೆದೊಯ್ದರು. ಸಣ್ಣಮರಿಗಳು ಅಮ್ಮನ ಜೊತೆಯಲ್ಲಿ ಮುದ್ದು ಮುದ್ದಾಗಿ ಪುಟುಪುಟು ಓಡಾಡುತ್ತಿದ್ದವು. ಬಿಸಿಲಿನ ಝಳಕ್ಕೆ ಆನೆಗಳು ಆಗಾಗ್ಗೆ ಸೊಂಡಿಲಿನಿಂದ ಗೋಣ್ಣೆಯ ಬುಗ್ಗೆಯನ್ನು ತೆರೆಯುತ್ತಿದ್ದವು. ಆ ತುಂತುರಿನ ಸಿಂಪಡಣೆಗೆ ನಮ್ಮನ್ನು ಒಡ್ಡಿಕೊಂಡು ಆನೆಸವಾರಿಯನ್ನು ಅನುಭವಿಸಿದೆವು. ಅವು ತಮ್ಮ ಸ್ಪ್ರಿಂಕ್ಲರ್‌ಗಳನ್ನು ನಮ್ಮ ಕಡೆಗೆ ತಿರುವುತ್ತಿದ್ದವು. ಘೇಂಡಾಮೃಗಗಳು ತಮ್ಮ ಮೈಮೇಲೊಂದು ಹೆಚ್ಚುವರಿ ಪದರ ಚರ್ಮವನ್ನು ಹೊದ್ದಿದ್ದರಿಂದ ಸೈನಿಕರ ಸಮವಸ್ತ್ರಗಳನ್ನು ಹಾಕಿಕೊಂಡಿರುವಂತೆ ಕಾಣುತ್ತಿದ್ದವು. ಆನಂದದಿಂದ ಕೆಸರಿನ ಸ್ನಾನ ಮಾಡುತ್ತಿದ್ದವು. ವಿಸ್ತಾರವಾದ ಬ್ರಹ್ಮಪುತ್ರ ಮತ್ತು ಅದರ ಉಪನದಿಗಳ ನಡುವೆ ಜಾಗ ಮಾಡಿಕೊಂಡಂತಿರುವ ಅಸ್ಸಾಂ ರಾಜ್ಯ ಸಮತಟ್ಟಾದ ಬಯಲು. ಸಮತಟ್ಟಾಗಿರುವುದರಿಂದ ನೀರು ಬೇಗ ಹರಿದು ಹೋಗುವುದಿಲ್ಲ. ಹಿಮಾಲಯದ ಯಾವುದೋ ಕಣಿವೆಯಲ್ಲಿ ಮಳೆ ಸುರಿದರೂ ತುಂಬಿ ಹರಿಯುವ ಬ್ರಹ್ಮಪುತ್ರ ನದಿ, ಇಡಿಯಾಗಿ ಅಸ್ಸಾಮನ್ನು ಆವರಿಸಿಕೊಳ್ಳುತ್ತದೆ. ಅದರ ಆರ್ಭಟದ ನಡುವೆ ಜೀವ ಉಳಿಸಿಕೊಂಡಂತಿರುವ ಅಸ್ಸಾಂ ಅರ್ಧವರ್ಷ ಉಕ್ಕಿ ಹರಿಯುವ ನದಿಯಲ್ಲಿಯೇ ಬಾಳುತ್ತದೆ. ಬೇಸಿಗೆಯಲ್ಲಿಯೂ ತುಂಬಿ ಹರಿಯುತ್ತಿದ್ದ ಬ್ರಹ್ಮಪುತ್ರ ನದಿಯ ಹರವು ಸುಮಾರು ಒಂಬತ್ತು ಕಿಲೋಮೀಟರು! ಈ ನದಿ ಯಾವಾಗಲೂ ಹೀಗೆಯೇ ಇರುತ್ತದೆಯೆ? ‘ಇಲ್ಲ, ವರ್ಷದಲ್ಲಿ ಆರೇಳು ತಿಂಗಳು ಉಕ್ಕಿ ಹರಿಯುತ್ತದೆ!’ ಎಂಬ ಉತ್ತರ ಬಂತು.

ಗುವಾಹಟಿ ಎಂದಾಕ್ಷಣ ನೆನಪಿಗೆ ಬರುವುದು ಕಾಮಾಕ್ಯ ದೇವಸ್ಥಾನ. ಅದು ಬಿಹು ಕಾಲವಾದ್ದರಿಂದ ಇಡೀ ತಿಂಗಳು ವಿಪರೀತ





ಮರದ ಆಸರೆಯಲ್ಲಿ ಆರ್ಕಿಡ್

ರಶ್ ಎಂದೂ ಬೆಳಗಿನ ಜಾವ ಐದಕ್ಕೆ ಸರತಿ ಸಾಲಿನಲ್ಲಿ ನಿಂತರೆ ಹನ್ನೊಂದರ ಹೊತ್ತಿಗೆ ದರ್ಶನ ಆಗಬಹುದು ಎಂದರು. ಅದರ ಗೊಡವೆಯೇ ಬೇಡ ಎಂದುಕೊಳ್ಳುವಷ್ಟರಲ್ಲಿ ನಮ್ಮ ಜೊತೆಗೆ ಬಂದಿದ್ದ ತಮಿಳುನಾಡಿನ ಶಿವಕುಮಾರ್ — ‘ನಿನ್ನೆ ದರ್ಶನ ಮಾಡಿಕೊಂಡು ಬಂದೆ, ಅಲ್ಲಿ ಪಂಡರು ತಮ್ಮದೇ ಬೇರೆ ದರ್ಶನದ ವ್ಯವಸ್ಥೆ ಇಟ್ಟುಕೊಂಡಿದ್ದಾರೆ. ಅವರಿಗೆ ಐದು ನೂರು ರೂಪಾಯಿಗಳನ್ನು ಕೊಟ್ಟು ಒಂದೆರಡು ಗಂಟೆ ಕಾದರೆ ಸಾಕು, ನೇರ ಕರೆದುಕೊಂಡು ಹೋಗಿ ದರ್ಶನ ಮಾಡಿಸುತ್ತಾರೆ. ಆದರೆ ಅವರು ಆ ಸ್ಪೆಷಲ್ ಟಿಕೆಟ್ಟುಗಳನ್ನು ಎಲ್ಲಿ ಕೊಡುತ್ತಾರೆ ಎನ್ನುವುದು ಯಾರಿಗೂ ಗೊತ್ತಿಲ್ಲ. ಕೆಲವು ಫೋನ್ ನಂಬರ್‌ಗಳು ಮಾತ್ರ ಇವೆ. ಅದರ ಮೂಲಕವೇ ಎಲ್ಲ ವ್ಯವಹಾರ’ ಎಂದರು.

ಅಸ್ಸಾಂ ಮುಗಿದು, ಅರುಣಾಚಲ ಪ್ರದೇಶಕ್ಕೆ ಪ್ರವೇಶದ್ವಾರದಂತಿರುವ ಟಿಪ್ಪಿಯ ಆರ್ಕಿಡ್ ಸಂಶೋಧನಾ ಕೇಂದ್ರ ನಮ್ಮನ್ನು ತಡೆದು ನಿಲ್ಲಿಸಿತು. ನೂರಾರು ಆರ್ಕಿಡ್‌ಗಳ ಸಂಗ್ರಹ ಇರುವ ಅದೊಂದು ಅಪರೂಪದ ಆವರಣ. ಅರುಣಾಚಲ ಪ್ರದೇಶವನ್ನು ‘ಭಾರತದ ಆರ್ಕಿಡ್ ತಾಣ’ ಎಂದು ಗುರುತಿಸುತ್ತಾರೆ. ಅಲ್ಲಿಯ ಕಣಿವೆಗಳಲ್ಲಿನ ಮರಗಳಲ್ಲಿ ಸಾವಿರಾರು ಆರ್ಕಿಡ್‌ಗಳು ಅತ್ಯಂತ ಸುಂದರವಾದ ಹೂಗಳನ್ನು ಅರಳಿಸಿಕೊಂಡು ಕಣ್ಣರಳಿಸಿ ನೋಡುವಂತೆ ಮಾಡುತ್ತವೆ. ಸಾವಿರಾರು ಸಂಖ್ಯೆಯಲ್ಲಿ ಆರ್ಕಿಡ್‌ಗಳನ್ನು ಅಲ್ಲಿ ಸಾಕಿ ಬೆಳೆಸಿದ್ದಾರೆ. ಕಣಿವೆಗಳಲ್ಲಿನ ನಾನಾ ಜಾತಿಯ ಮರಗಳೆಲ್ಲ, ಹಸುಗೂಸುಗಳನ್ನು ಸಾಕುವಂತೆ ಆರ್ಕಿಡ್‌ಗಳನ್ನು ತಮ್ಮ ತೋಳುಗಳ ಮೇಲೆ ಸಾಕಿವೆ.

ಅಂದು ನಾವು ತಂಗಿದ್ದು ಬೊಮ್ಡಿಲಾ ಬೌದ್ಧ ವಿಹಾರದಲ್ಲಿ. ಒಮ್ಮೆಲೇ ಮೈಗದಗುಡುವ ಚಳಿ ಆರಂಭವಾಯಿತು. ಭಾನುವಾರವಾದ್ದರಿಂದ ವಿಹಾರ ಬಿಕೋ ಎನ್ನುತ್ತಿತ್ತು. ವಿಹಾರಕ್ಕಿಂತ ಭಿಕ್ಕುಗಳು ತಂಗುವ, ಯಾತ್ರಿಕರಿಗೆ ಜಾಗ ಒದಗಿಸುವ ಕಟ್ಟಡಗಳದ್ದೇ ಅಬ್ಬರ ಅನ್ನಿಸಿತು. ವಿಹಾರದಲ್ಲಿ ಬುದ್ಧ, ಪದ್ಮಸಂಭವ ಮುಂತಾದವರ ವಿಗ್ರಹಗಳಿದ್ದವು. ಎದುರಿಗೆ ಇನ್ನೊಂದು ಹನಿ ಹಾಕಿದರೂ ತುಳುಕುತ್ತದೆ ಎನ್ನುವ ಹಾಗೆ ನೀರನ್ನು ತುಂಬಿದ ಬಟ್ಟಲುಗಳನ್ನು ಇಟ್ಟಿದ್ದರು. ನಂದಾದೀಪಗಳು ತಣ್ಣಗೆ ಉರಿಯುತ್ತಿದ್ದವು. ಅಶ್ವಘೋಷನ ಹೆಸರಿನ ಒಂದು ಬೃಹತ್ ಗ್ರಂಥಾಲಯ ಇದೆ. ಟಿಬೆಟಿಯನ್